# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 864 |
| ಉತ್ತರಿಸಬೇಕಾದ ದಿನಾಂಕ | 24.07.2024 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಶೇ.90 ರಷ್ಟು ಖಾಸಗಿ ಬಿಲ್ಡರ್‌ಗಳು ವಸತಿ ಇಲಾಖೆ ಅಧೀನದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ನಿಯಮಾವಳಿಗಳನ್ವಯ ತಮ್ಮ ನಿರ್ಮಾಣ ಕಂಪನಿಗಳನ್ನು ನೋಂದಾಯಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು, ಶೇ.10ರಷ್ಟು ಖಾಸಗಿ ಬಿಲ್ಡರ್‌ಗಳು ನೋಂದಣಿಯಿಲ್ಲದೆ ವಸತಿಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಕರ್ನಾಟಕ ರಿಯಲ್ ಎಸ್ಟೇಟ್ ನಿಯತ್ರಣ ಪ್ರಾಧಿಕಾರ (RERA) ವತಿಯಿಂದ ಬಹುತೇಕ ಖಾಸಗಿ ಬಿಲ್ಡರ್‌ಗಳು ವಸತಿ ಮನೆಗಳನ್ನು ನಿರ್ಮಿಸಲು ಪಡೆದಿರುವ ಅನುಮೋದನೆಗಿಂತ ಹೆಚ್ಚು ಅಂತಸ್ತು / ಮಹಡಿಗಳನ್ನು / ಮನೆಗಳನ್ನು ನಿರ್ಮಿಸಿ ಇಲಾಖೆಯ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು; | ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಕಲಂ 3(2) ರ ಅನ್ವಯ 8 ಕ್ಕಿಂತ ಹೆಚ್ಚು ವಸತಿ ಘಟಕಗಳನ್ನು ನಿರ್ಮಿಸುತ್ತಿರುವ ಅಥವಾ ಅಭಿವೃದ್ಧಿಪಡಿಸುತ್ತಿರುವ ವಸತಿ ಯೋಜನೆಯ (Real Estate projects) ಭೂ ವಿಸ್ತೀರ್ಣ 500 ಚ.ಮೀ ಗಿಂತ ಹೆಚ್ಚು ಇದ್ದಲ್ಲಿ ಅಂತಹ Real Estate projects ಗಳನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಸದರಿ ಕಾಯ್ದೆಯ ಕಲಂ 3 ಮತ್ತು 4ರಂತೆ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.<br><br>ಅಭಿವೃದ್ಧಿದಾರರು ತಮ್ಮ ವಸತಿ ಯೋಜನೆಗಳಿಗೆ ಸಂಬಂಧಪಟ್ಟ ಕಟ್ಟಡ ಪರವಾನಗಿ (Building License) ನೀಡುವ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯ ನಂತರವಷ್ಟೆ ರೇರಾ ಕಾಯ್ದೆ, 2016 ರ ಕಲಂ 4 ರ ಪ್ರಕಾರ ರೇರಾ ಪ್ರಾಧಿಕಾರದ ಮುಂದೆ ರೇರಾ ನೋಂದಣಿಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ.<br><br>ಮುಂದುವರೆದು ರೇರಾ ನೋಂದಣಿಯಾದ ಅಭಿವೃದ್ಧಿದಾರರು ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಅನುಮೋದಿತ ನಕ್ಷೆಯ ಪ್ರಕಾರ ಪ್ರಾಜೆಕ್ಟ್ ಪೂರ್ಣಗೊಂಡ ಮೇಲೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಸಕ್ಷಮ ಪ್ರಾಧಿಕಾರಗಳಿಂದ Occupancy Certificateನ್ನು ಪಡೆದ ನಂತರ 3 ತಿಂಗಳೊಳಗಾಗಿ ರೇರಾ ಕಾಯ್ದೆ, 2016ರ ಕಲಂ 17ರನ್ವಯ ಗೃಹ ಖರೀದಿದಾರರಿಗೆ ಫ್ಲಾಟ್‌ಗಳನ್ನು ಹಸ್ತಾಂತರಿಸಬೇಕಾಗಿರುತ್ತದೆ.<br><br>ಅಭಿವೃದ್ಧಿದಾರರು ಮಾರಾಟ ಖರಾರು ಪತ್ರದ ಪ್ರಕಾರ ರೇರಾ ಕಾಯ್ದೆ ಮತ್ತು ನಿಯಮಗಳನ್ವಯ ಫ್ಲಾಟ್‌ಗಳನ್ನು ನಿಗದಿತ ಸಮಯದೊಳಗೆ ಹಸ್ತಾಂತರಿಸದಿರುವುದರಿಂದ ಬಾದಿತರಾದ ಗೃಹ ಖರೀದಿದಾರರು ರೇರಾ ಪ್ರಾಧಿಕಾರದಲ್ಲಿ ಕಲಂ 31ರನ್ವಯ ದೂರನ್ನು ದಾಖಲಿಸಿದ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಭಿವೃದ್ಧಿದಾರರ ವಿರುದ್ಧ ರೇರಾ ಕಾಯ್ದೆಯ ಕಲಂ 59, 60-63 ಮತ್ತು 65ರನ್ವಯ ರೇರಾ ಪ್ರಾಧಿಕಾರವು ಕ್ರಮಕೈಗೊಳ್ಳುತ್ತದೆ. |

| | | |
|---|---|---|
| ಇ) | ಈಗಾಗಲೇ ಪ್ರಾಧಿಕಾರದ ವತಿಯಿಂದ ಕಪ್ಪುಪಟ್ಟಿಗೆ ಸೇರಿಸಿರುವಂತಹ ಖಾಸಗಿ ಬಿಲ್ಡರ್‌ಗಳು ಅಪಾರ್ಟ್‌ಮೆಂಟ್ / ವಸತಿ ಮನೆಗಳನ್ನು ನಿರ್ಮಿಸಲು ಮುಂದಾಗಿ ಸಾರ್ವಜನಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಈ ವಿಷಯವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡುವ ಸಂಬಂಧ ರೇರಾ ಪ್ರಾಧಿಕಾರದ ಅಂತರ್ ಜಾಲತಾಣ **(web-portal)** ಮುಖಪುಟದಲ್ಲಿ **Default Project List** ಎಂಬ ಶೀರ್ಷಿಕೆಯಡಿ ಕುಂಠಿತವಾಗಿರುವ ರಿಯಲ್ ಎಸ್ಟೇಟ್ ಯೋಜನೆಗಳು ಹಾಗೂ ಅದೇ ರೀತಿ **Un-Registered** ಶೀರ್ಷಿಕೆಯಡಿ ನೋಂದಣಿಯಾಗದ ಯೋಜನೆಗಳ ಹೆಸರುಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿದೆ ಹಾಗೂ ಅಂತಹ ಯೋಜನೆಗಳ ವಿರುದ್ಧ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಅನ್ವಯ ನೋಟೀಸ್ ಜಾರಿ ಮಾಡಿ ವಿಚಾರಣೆ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ವಇ 91 ರೇರಾ 2024]

**(ಬಿ.ಝಡ್.ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.